ಶ್ರೀ ಬಸವರಾಜಪಾಟೀಲ್.—ತುಂಗಭದ್ರಾ ನದಿಯ ಪ್ರದೇಶದಲ್ಲಿರುವಂತಹ ರೈತರು ಮೇವು ಬೆಳೆಯುವಂತೆ ವ್ಯವಸ್ಥೆ ಮಾಡಲಾಗಿದೆ ಎಂದು ಮಾನ್ಯ ಸಚಿವರು ಹೇಳಿದರು. ಅದೇ ರೀತಿಯಲ್ಲಿ ಜವಣಗೇರಿ ಫಾರಂನಲ್ಲಿ ಸುಮಾರು ೫–೬ ಸಾವಿರ ಎಕರೆ ಜಮೀನು ಇದೆ, ಅಲ್ಲಿ ಮೇವು ಬೆಳೆಸುವಂತಹ ವ್ಯವಸ್ಥೆಯನ್ನು ಏತಕ್ಕೆ ಮಾಡಬಾರದು?

ಶ್ರೀ ಎಂ. ಪಿ. ಪ್ರಕಾಶ್ (ಮಾನ್ಯ ಕೃಷಿ ರಾಜ್ಯ ಸಚಿವರು).—ಮಾನ್ಯ ಅಧ್ಯಕ್ಷರೇ ಮಾನ್ಯ ಸದಸ್ಯರ ಸಲಹೆ ಉತ್ತಮವಾಗಿದೆ ಅದು ಕೇಂದ್ರ ಸರ್ಕಾರಕ್ಕೆ ಸೇರಿದ ಫಾರಂ. ಈ ವಿಷಯವನ್ನು ನಾನು ಕೇಂದ್ರ ಸರ್ಕಾರದ ಮುಂದೆ ಇಟ್ಟು ಅವರಿಂದ ಒಪ್ಪಿಗೆಯನ್ನು ಪಡೆದು ಅಲ್ಲಿಗೆ ಹೆಚ್ಚು ಹಣವನ್ನು ಬಿಡುಗಡೆ ಮಾಡುವಂತೆ ಮಾಡಲು ಪ್ರಯತ್ನ ಮಾಡುತ್ತೇನೆ.

ರಾಜ್ಯದಲ್ಲಿ ಗ್ರಾಮೀಣ ಉದ್ಯೋಗ ಯೋಜನೆ

೨೫೬. ಶ್ರೀ ಆರ್. ವೆಂಕಟರಾವಯ್ಯ (ಮಂಚಬಾಗಿಲು) ಮಾನ್ಯ ಗ್ರಾಮೀಣ ಅಭಿವೃದ್ಧಿ ಹಾಗೂ ಪಂಚಾಯತ್ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ರಾಜ್ಯದಲ್ಲಿ ಜಾಲ್ತಿ ವರ್ಷದಲ್ಲಿ ಗ್ರಾಮೀಣ ಉದ್ಯೋಗ ಯೋಜನೆಗಾಗಿ ವಿನಿಯೋಗಿಸಿರುವ ಹಣವೆಷ್ಟು? ಹಾಗೂ ಈಗಾಗಲೇ ವೆಚ್ಚ ಮಾಡಿರುವುದೆಷ್ಟು? ಎಷ್ಟು ಮಾನವ ದಿನಗಳ ಕೆಲಸ ನಿರ್ಮಾಣವಾಗಿದೆ,

ಆ) ಹಿಂದಿನ ಮೂರು ವರ್ಷಗಳಲ್ಲಿ ಗ್ರಾಮೀಣ ಉದ್ಯೋಗ ಯೋಜನೆಗಾಗಿ ವೆಚ್ಚ ಮಾಡಿರುವ ಹಣವೆಷ್ಟು ಹಾಗೂ ಅದರಿಂದ ನಿರ್ಮಿತವಾದ ಮಾನವ ದಿನಗಳೆಷ್ಟು?

ಇ) ಬರಗಾಲದ ಸತತ ಪರಿಣಾಮವನ್ನು ಅನುಭವಿಸುತ್ತಿರುವ ಈ ವರ್ಷದಲ್ಲಿ ಹಣ ವಿನಿಯೋಗ ಹಾಗೂ ಯೋಜನೆಗಳ ಸಂಖ್ಯೆಯನ್ನು ಹೆಚ್ಚು ಮಾಡಲು ಸರ್ಕಾರದವರ ಉದ್ದೇಶವೇನಾದರೂ ಇದೆಯೇ?

ಶ್ರೀ ಅಬ್ದುಲ್ ನಜೀರ್ ಸಾಬ್ (ಗ್ರಾಮೀಣ ಅಭಿವೃದ್ಧಿ ಮತ್ತು ಪಂಚಾಯಿತ್ ರಾಜ್ಯ ಸಚಿವರು.).—

ಅ)

ಗ್ರಾಮಾಂತರ ಭೂರಹಿತ ಉದ್ಯೋಗ ಭರವಸೆ ಯೋಜನೆ,		ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಯೋಜನೆ.	
೧೯೮೫–೮೬ನೇ ಸಾಲಿಗೆ ಒದಗಿಸಿರುವ ಹಣ ರೂ.	೨೩೫೦–೦೦	೧೯೮೫–೮೬ ಅ. ವಿನಿಯೋಗಿಸಿದ ಹಣ (ಲಕ್ಷ ರೂ.)	೨೧೬೦.೦೦೦
ಈಗಾಗಲೇ ವೆಚ್ಚ ಮಾಡಿರುವ ಹಣ ರೂ.	೧೩೫–೬೧೧	ಬಿ. ತಾ. ೩೧–೧೨–೮೫ರ ವರೆಗೆ ಖರ್ಚಾದ ಹಣ (ಲಕ್ಷ ರೂ. ಗಳಲ್ಲಿ)	೧೯೧೦.೪೬೬
ಮಾನವ ದಿನಗಳು	೮೩.೭೭	ಸಿ. ಉದ್ಯೋಗ. ಕೊಟ್ಟಿದ್ದು (ಲಕ್ಷ ಮಾನವ ದಿನಗಳಲ್ಲಿ ತಾ. ೩೧–೧೨–೧೯೮೫ ರವರೆಗೆ	೧೨೭.೨೨೨

ಆ) ವರ್ಷ	ಯೋಜನೆ	ವೆಚ್ಚ ಮಾಡಿರುವ ಹಣ	ಮಾನವ ದಿನಗಳು	ವರ್ಷ	ಖರ್ಚಾದ ಹಣ	ನಿರ್ಮಿತವಾದ ಮಾನವ ದಿನಗಳು
೧೯೮೨–೮೩	೧೯೮೪ನೇ ಮಾರ್ಚಿಂಗಳಲ್ಲಿ ಯೋಜನೆಯು ಪ್ರಾರಂಭವಾದ್ದು,	ಇಲ್ಲ		೧೯೮೨–೮೩	೨೫೫೮.೪೫೯	೨೭೧.೧೦
				೧೯೮೩–೮೪	೨೬೬೧.೮೧೮	೨೩೪.೪೪೫
				೧೯೮೪–೮೫	೪೫೮೮.೬೩೬	೪೧೭.೦೫೫೩
೮೩–೮೪	ಆರ್‌ಎಲ್‌ಇಜಿಪಿ	೮೭.೭೨೮	ಸಲಕರಣೆಗೆ ಮಾತ್ರ			
೮೪–೮೫	ಆದೇ	೧೮೫೫.೬೮೩	೧೭೮.೪೪೨			

ಇ) ಈ ವರ್ಷ ರೂ. ೨೩೫೦.೦೦ ಲಕ್ಷ ಹಣವನ್ನು ಒದಗಿಸಿದ್ದು ಪೂರ್ತಿ ಹಣವನ್ನು ವಿನಿಯೋಗಿಸಲಾಗುವುದು.

ಈ ವರ್ಷದಲ್ಲಿ ಒದಗಿಸಿರುವ ರೂ. ೨೧೬೦-೦೦ ಲಕ್ಷ ಪೂರ್ತ ಹಣವನ್ನು ವಿನಿಯೋಗಿಸಲಾಗುವುದು

ಶ್ರೀ ಆರ್. ವೆಂಕಟರಾಮಯ್ಯ.—ಮಾನ್ಯ ಅಧ್ಯಕ್ಷರೇ ನಾನು ವರ್ಷವಾರು ವಿವರ ಕೇಳಿದ್ದೆ. ಅವರು ಕೊಟ್ಟಿರುವ ಉತ್ತರವನ್ನು ನೋಡಿದರೆ ಉದ್ಯೋಗ ಭರವಸೆ ಯೋಜನೆ ಅಡಿಯಲ್ಲಿ ೧೯೮೫-೮೬ಕ್ಕಿಂತ ಈ ವರ್ಷ ೩.೯೮ ಲಕ್ಷ ರೂ. ಕಡಿಮೆಯಾಗಿದೆ. ಅದೇ ೧೯೮೫-೮೬ಕ್ಕಿಂತ ಈ ವರ್ಷ ೫೦೧ ಲಕ್ಷ ರೂ ಕಡಿಮೆಯಾಗಿದೆ. ಈ ವರ್ಷ ೧೩೪೮ ಲಕ್ಷ ಕಡಿಮೆ ಯಾಗಿದೆ. ಇದರಿಂದ ಉದ್ಯೋಗ ಭರವಸೆ ಯೋಜನೆಏನಿದೆ, ಅದು ಕಡಿಮೆಯಆದಂತೆ ಆಗಿಲ್ಲವೇ? ಅವರು ಕೊಟ್ಟಿರುವ ಲೆಕ್ಕವನ್ನೇ ನಾನು ಓದುತ್ತೇನೆ. ಇದು ಕಡಿಮೆಯಾಗಿರುವುದು ಒಂದು ಅನ್ಯಾಯ ಇನ್ನೊಂದುವಿಷಯ ಕೇಳುತ್ತೇನೆ ಅವರು ಕೊಟ್ಟಿರುವುದು ೨೩೫೦ ಲಕ್ಷ ಈಗಾಗಲೇ ವೆಚ್ಚ ಮಾಡಿರುವುದು ೧೩೭೭ ಲಕ್ಷ. ಇನ್ನೂ ಖರ್ಚಾಗಬೇಕಾಗಿರುವುದು ೧೩೧೫ ಲಕ್ಷ ಇದು ಆರ್. ಎಲ್. ಇ, ಜಿ. ಪಿ. ಯಲ್ಲಿ. ಇನ್ನು ಎನ್.ಆರ್.ಇ.ಪಿ. ಯಲ್ಲಿ ಕೊಟ್ಟಿರುವುದು ೨೧೬೦ ಲಕ್ಷ ಖರ್ಚಾಗಿರುವುದು ೧೯೧೦ ಲಕ್ಷ. ಇನ್ನೂ ಖರ್ಚಾಗದೇ ಬಾಕಿ ಇರುವುದು ೨೫೦ ಲಕ್ಷ.

ಅಧ್ಯಕ್ಷರು.—ಸಪ್ಲಿಮೆಂಟರಿ ಕೊಶ್ಚನ್ ಕ್ಲಿಯರ್ ಆಗಿ ಕೇಳಿ. ನೀವು ವಕಾಲತ್ತು ವಹಿಸಿದವರು ನಿಮಗೆ ಹೇಳಿ ಕೊಡಬೇಕೇ?

ಶ್ರೀ ಆರ್. ವೆಂಕಟರಾಮಯ್ಯ.—ಉದ್ಯೋಗ ಭರವಸೆ ಯೋಜನೆಯಲ್ಲಿ ಹಣ ಖರ್ಚು ಮಾಡದೇ ಬಾಕಿ ಇಟ್ಟುಕೊಂಡಿದ್ದೀರಿ, ಉದ್ಯೋಗ ಮಾಡುವವರು ಸಿಗುವುದಿಲ್ಲವೆ?

ಶ್ರೀ ಅಬ್ದುಲ್ ನಜೀರ್ ಸಾಬ್.—ಮಾನ್ಯ ಅಧ್ಯಕ್ಷರೇ ಮಾನ್ಯ ಸದಸ್ಯರು ಯಾವ ಅಂಕಿ ಅಂಶಗಳನ್ನು ಓದಿದರು ಎಂಬುದು ಗೊತ್ತಾಗಲಿಲ್ಲ. ಯಾವುದೂ ಕಡಿಮೆಯಾಗಿಲ್ಲ ೧೯೮೫-೮೬ರಲ್ಲಿ ೨೩, ೫೮, ೪೫, ಸಾವಿರ ಚಿಲ್ಲರೆ ಇದ್ದರೆ, ೧೯೮೬-೮೫ ರಲ್ಲಿ ೪೫ಕೋಟಿ ಖರ್ಚು ಮಾಡಿರುತ್ತೇವೆ. ಖರ್ಚು ಕಡಿಮೆ ಎಲ್ಲಾಗಿದೆ ಎಂದು ನನಗೆ ಗೊತ್ತಾಗಲಿಲ್ಲ. ಅವರು ಯಾವ ಅಂಕಿ ಅಂಶಗಳನ್ನು ಓದಿದರೋ ಗೊತ್ತಾಗಲಿಲ್ಲ. ಹೋದವರ್ಷ ನಾವು ೪೫ ಕೋಟಿ ರೂಪಾಯಿಗಳನ್ನು ಖರ್ಚು ಮಾಡಿರುತ್ತೇವೆ ಖರ್ಚು ಕಡಿಮೆ ಹೇಗೆ ಆಗುತ್ತದೆ?

ಶ್ರೀ ಆರ್. ವೆಂಕಟರಾಮಯ್ಯ.—೧೯೮೫-೮೬ ನೇ ಸಾಲಿನಲ್ಲಿ ಕಡಿಮೆ ಆಗಿದೆ.

ಶ್ರೀ ಅಬ್ದುಲ್ ನಜೀರ್ ಸಾಬ್.—ಸ್ವಾಮಿ ಯೋಜನೆಗಳು ಹೇಗೆ ಆಗುತ್ತವೆ. ಎಂಬುದನ್ನು ನಾನು ಸ್ಪಷ್ಟಪಡಿಸಬೇಕಾಗುತ್ತದೆ. ಇದಕ್ಕೆ ೨೧ ಕೋಟಿ ರೂಪಾಯಿಗಿಂತ ಹೆಚ್ಚು ಒದಗಿಸುವ ಹಾಗೆ ಇಲ್ಲ. ಇದಕ್ಕೆ ಒದಗಿಸತಕ್ಕದ್ದು ೨೧ ಕೋಟಿ ರೂಪಾಯಿಗಳ ಬಜೆಟೆಡ್ ಹಣ. ಜನಸಂಖ್ಯೆಗನುಗುಣವಾಗಿ, ಕಾರ್ಯಕ್ರಮಗಳಿಗೆ ಅನುಗುಣವಾಗಿ, ಕೇಂದ್ರ ಸರಕಾರ ಒಂದು ನಿರ್ದೇಶನ ಕೊಟ್ಟು. ಇಷ್ಟು ಹಣವನ್ನು ನಾವು ಈ ಯೋಜನೆಗೆ ಕೊಡುತ್ತೇವೆ ಎಂದು ಹೇಳುತ್ತದೆ. ಇದರ ಮೊತ್ತ ೨೧ ಕೋಟಿ ರೂಪಾಯಿಗಳು. ಇದರಲ್ಲಿ ನಾವು ಅರ್ಧ, ಕೇಂದ್ರ ಸರ್ಕಾರ ಅರ್ಧ ಹಣ ಕೊಟ್ಟ ಕಾರ್ಯಕ್ರಮ ಮಾಡಲಾಗುತ್ತದೆ. ಎನ್.ಆರ್.ಇ.ಪಿ. ಯಲ್ಲಿ ದುಡ್ಡು ಉಳಿದಿದೆ ಎಂದು ಅಲ್ಲ ಅಲ್ಲಿ ದುಡ್ಡು ಉಳಿದಿಲ್ಲ ೧೧ ಕೋಟಿ ರೂಪಾಯಿ ರಿಲೀಸ್ ಆಗಿ ಆದರಲ್ಲಿ ೧೯ ಕೋಟಿಯನ್ನು ಖರ್ಚು ಮಾಡಲಾಗಿದೆಆದರೆ ಇಂಪ್ಲಿಮೆಂಟಿಂಗ್ ಏಜೆನ್ಸಿಗಳು ಹತ್ತಾರು ಇರುತ್ತವೆ.ಆದಕಾರಣ ಬೇಗ ಯುಟಿಲೈಸೇಷನ್ ಸರ್ಟಿಫಿಕೇಟ್‌ಗಳು ಅಲ್ಲಿಂದ ಬರುವುದಿಲ್ಲ.ಎಲ್ಲಿಯಂವರೆಗೆ ಈ ಯುಟಿಲೈಸೇಷನ್ ಸರ್ಟಿಫಿಕೇಟ್‌ಗಳು ಬರುವುದಿಲ್ಲವೋ ಅಲ್ಲಿಯವರೆಗೆ ಈ ಹಣ ಖರ್ಚಾಗಿಲ್ಲ ಎಂದು ಲೆಕ್ಕವನ್ನು ನಾವು ಸದನಕ್ಕೆ ಕೊಡುತ್ತೇವೆ. ಈಗ ಹಣ ಇಲ್ಲ, ಎಲ್ಲಾ ಖರ್ಚಾಗಿ ಹೋಗಿದೆ. ೨೧ ಕೋಟಿ ಹಣ ಸಾಲದು. ನಾವು ಇನ್ನೂ ಸಾಲ್ಕೆಯದು ಕೋಟಿ ಬಿಡುಗಡೆ ಮಾಡುತ್ತೇವೆ.

ಶ್ರೀ ಆರ್ ವೆಂಕಟರಾಮಯ್ಯ.—ನೀವು ಕೊಟ್ಟಿರುವ ಲೆಕ್ಕದ ಪ್ರಕಾರ ಈ ಯೋಜನೆಯಲ್ಲಿ ಖರ್ಚಾಗಿರುವ ಹಣ ೧೯೮೫-೮೬ರಲ್ಲಿ ೨೫೫೮.೪೫ ಲಕ್ಷ ರೂ ೧೯೮೫-೮೪ ರಲ್ಲಿ ೨೬೬೧.೪೧೮ ಲಕ್ಷ ರೂ. ೧೯೮೪-೮೫ರಲ್ಲಿ ೪೫೦೯.೬೨೬ ಲಕ್ಷ ರೂ.ಆನೇ ೧೯೮೫-೮೬ರಲ್ಲಿ ಆರ್.ಎಲ್.ಇ.ಜಿ.ಪಿ.ಗೆ ೨೩೫೦ ಲಕ್ಷರೂ,

ಎನ್.ಆರ್.ಇ.ಪಿ.ಗೆ ೨೧೬೦ ಲಕ್ಷ ರೂ. ಇಲ್ಲಿ ಕಡಿಮೆಯಾಗಿದೆ, ನೀವು ಜಾಸ್ತಿ ಕೊಟ್ಟಿದ್ದೇವೆ ಎಂದು ಹೇಳುತ್ತಿದ್ದೀರಿ. ಎಲ್ಲೋ ಮಿಸ್ಟೇಕ್ ಇರಬಹುದು.

ಶ್ರೀ ಅಬ್ದುಲ್ ನಜೀರ್ ಸಾಬ್.—ಸ್ವಾಮಿ. ೧೯೮೪-೮೫ರಲ್ಲಿ ಸ್ಕೇರ್ಸಿಟಿ ಕಾರ್ಯಕ್ರಮ ಎಂದು ಏನು ಮಾಡಿದೆವು, ಅದರಲ್ಲಿ ಅಡಿಷನಲ್ ಆಗಿ ಎನ್.ಆರ್.ಇ.ಪಿ. ಕಾರ್ಯಕ್ರಮ ಮಾಡಿದೆವು. ಒರಿಜಿನಲ್ ಎನ್.ಆರ್.ಇ.ಪಿ. ಕಾರ್ಯಕ್ರಮಕ್ಕೆ ಇದ್ದುದು ೨೬ ಕೋಟಿ ರೂಪಾಯಿಗಳು. ಆದರೆ ನಾವು ಇನ್ನೂ ೧೮ ಕೋಟಿ ರೂಪಾಯಿಗಳನ್ನು ಬೇರೆ ಲೆಕ್ಕದಿಂದ ಇದಕ್ಕೆ ಹಾಕಬೇಕಾಯಿತು. ಒಟ್ಟಿನಲ್ಲಿ ನಾವು ಮೆಚ್ಚಿ ಮಾಡಬೇಕಾಗಿದ್ದು ೨೧ ಕೋಟಿ ರೂಪಾಯಿ ನಾವು ೨೧ ಕೋಟಿಗಿಂತ ಹೆಚ್ಚು ಮಾಡುವ ಹಾಗೆ ಇಲ್ಲ ಇದಕ್ಕೆ ಹೆಚ್ಚು ಮಾಡುವಾಗ ನಮ್ಮ ಹಣವನ್ನು ಇದಕ್ಕೆ ತೊಡಗಿಸಿದ್ದೇವೆ, ಬೇರೆ ಸಂಪನ್ಮೂಲಗಳನ್ನು ಇದಕ್ಕೆ ಒದಗಿಸಿ ಹೆಚ್ಚು ಖರ್ಚು ಮಾಡಿದ್ದೇವೆ ಕಡಿಮೆಯಾಗಿದೆ ಎಂಬ ಭಾವನೆ ತಪ್ಪು. ಇದಕ್ಕೆ ಕಾನೂನು ಬದ್ಧವಾಗಿ ನ್ಯಾಯಬದ್ಧವಾಗಿ ಖರ್ಚು ಮಾಡಬೇಕಾದುದು ೨೧ ಕೋಟಿ ರೂಪಾಯಿ ಮಾತ್ರ. ನಾವು ೨೧ ಕೋಟಿ ರೂಪಾಯಿಗಿಂತ ಹೆಚ್ಚು ಹಣವನ್ನು ನಮ್ಮ ವಿಜಾನೆಯಿಂದ ಹಾಕಿ ಖರ್ಚು ಮಾಡಿ ಕೆಲಸ ಮಾಡಿದ್ದೇವೆ.

ಶ್ರೀ ಆರ್. ವೆಂಕಟರಾಮಯ್ಯ.—ಖರ್ಚಾಗದೇ ಇರುವ ಹಣವನ್ನು ಬೇಗ ಖರ್ಚು ಮಾಡುವ ಜವಾಬ್ದಾರಿ ವಹಿಸಿಕೊಳ್ಳುತ್ತೀರಾ?

SRI ABDUL NAZIR SAB.— Money has been spent but technically not spent. Unless and untill they give utilisation certificate by the respective implementing agencies.

ಇನ್ನು ಆರ್. ಎಲ್. ಇ. ಜಿ. ಪಿ. ವಿಚಾರದಲ್ಲಿ ಅವರ ಸಂಶಯ ಏನಿದೆ ಅದಕ್ಕೆ ಉತ್ತರ ಹೇಳುತ್ತೇನೆ. ಈ ಹಣ ನಮಗೆ ಅಕ್ಟೋಬರ್ ಕೊನೆಯಲ್ಲಿ ಬಂದಿತ್ತು. ಅದಕ್ಕೂ ಕೂಡಾ ನಾವು ಕಾರ್ಯಕ್ರಮ ಹಾಕಿಕೊಂಡು ಈ ವರ್ಷದ ಕೊನೆಯೊಳಗೆ ಖರ್ಚು ಮಾಡುತ್ತೇವೆ. ಇದರ ಬಗ್ಗೆ ಯಾರು ಯಾರಿಗೆ ಯಾವ ಯಾವ ನಿರ್ದೇಶನ ಕೊಡಬೇಕು, ಅದನ್ನು ನಾನೇ ಖುದ್ದಾಗಿ ಎಲ್ಲಾ ವಿಭಾಗಳಿಗೆ ಹೋಗಿ, ನಮ್ಮ ರಾಜ್ಯ ಮಂತ್ರಿಗಳ ಜೊತೆ ಹೋಗಿ, ಅಧಿಕಾರಿಗಳ ಸಭೆಯನ್ನು ನಡೆಸಿ ಹೇಳಿದ್ದೇನೆ. ಮತ್ತೊಮ್ಮೆ ನಮ್ಮ ಈ ಸದನ ಮುಗಿಯುವ ಮುಂಚೆ ಅಧಿಕಾರಿಗಳನ್ನು ಕರೆಸುತ್ತೇನೆ, ಆ ಹಣ ಪೂರ್ಣವಾಗಿ ಖರ್ಚಾಗುವಂತೆ ನೋಡಿಕೊಳ್ಳುತ್ತೇನೆ.

ಶ್ರೀ ಆರ್. ವೆಂಕಟರಾಮಯ್ಯ.—ಸೆಂಟ್ರಲ್ ಗೌರ್ನಮೆಂಟ್‌ನ ಗ್ರಾಂಟ್ ಇದಕ್ಕೆ ಕಡಿಮೆಯಾಗಿದೆಯಲ್ಲ.

ಅಧ್ಯಕ್ಷರು.—ನೀವು ಈ ರೀತಿ ಕೇಳುತ್ತಿದ್ದರೆ, ಅದಕ್ಕೆ ಉತ್ತರ ಹೇಳಬೇಡಿ ಎಂದು ಹೇಳಬೇಕಾಗಂತ್ತದೆ.

ಶ್ರೀ ಅಬ್ದುಲ್ ನಜೀರ್ ಸಾಬ್.—ಕೇಂದ್ರದಿಂದ ಹಣ ಕಡಿಮೆ ಬಂದಿದೆ ಎಂಬುದು ಅವರ ಅಭಿಪ್ರಾಯಂ. ಎನ್. ಆರ್. ಇ. ಪಿ. ಗೆ ಬರುವುದು ೨೧ ಕೋಟಿ ರೂಪಾಯಿ ಮಾತ್ರ ಆರ್. ಎಲ್. ಇ. ಜಿ. ಪಿ. ಗೆ ಹೋದವರ್ಷಕ್ಕಿಂತ ಈ ವರ್ಷ ಕಡಿಮೆ ಬಂದಿದೆ. ಈ ಬಗ್ಗೆ ನಾವು ಕೇಂದ್ರ ಸರ್ಕಾರಕ್ಕೆ ಬರೆದಿದ್ದೇವೆ. ಆದರ ಜೊತೆ ಪತ್ರ ವ್ಯವಹಾರ ಮಾಡುತ್ತಿದ್ದೇವೆ.

ಪ್ರಶ್ನೆ ಸಂಖ್ಯೆ ೧೧೪(೨೯೮)ನ್ನು ಮುಂದೂಡಲಾಗಿದೆ.

ಪ್ರಶ್ನೆ ಸಂಖ್ಯೆ ೨೨೩ ಬಸವಲಿಂಗಪ್ಪನವರೇ ನಿಮ್ಮ ಪ್ರಶ್ನೆಯನ್ನು ಮುಂದಕ್ಕೆ ಹಾಕಿದೆ.

ಶ್ರೀ ಬಿ. ಬಸವಲಿಂಗಪ್ಪ.—ಮುಂದೂಡಲಿಕ್ಕೆ ನನ್ನ ಅಭ್ಯಂತರ ಇಲ್ಲ. ಆದರೆ ಮೊನ್ನೆ, ನಿನ್ನೆ ಇವತ್ತು, ಮೂರು ದಿವಸಗಳಿಂದ ನನ್ನ ಪ್ರಶ್ನೆಗೆ ಉತ್ತರ ಕೊಡಬಾರದೆಂದು ಸರ್ಕಾರದವರು ಇದ್ದಾರೋ ?

ಅಧ್ಯಕ್ಷರು —ತಾವು ಮಂತ್ರಿಗಳಾಗಿದ್ದವರು, ತಪ್ಪಿಗೆ ಸಾಕಷ್ಟು ಅನುಭವ ಇದೆ.